**ದಿಃ 02.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎಸ್ ಕೆ ವಕೀಲರಿಂದಃ

ನನ್ನ ಕಡೆಯಿಂದ ಹಣವನ್ನು ಆರೋಪಿ ಅಥವಾ ಅವರ ಗಂಡ ಇಬ್ಬರಲ್ಲಿ ಯಾರು ತೆಗೆದುಕೊಂಡಿರುವುದು ಎಂದರೆ ಸಾಕ್ಷಿ ಆರೋಪಿ ಎಂದು ನುಡಿಯುತ್ತಾರೆ. ನಾನು ರೂ.**3,50,000/-** ಎಷ್ಟು ಕಂತಿನಲ್ಲಿ ಹಾಗೂ ಯಾವಾಗ ನೀಡಿದ್ದೇನೆ ಎಂದರೆ ಸಾಕ್ಷಿ ಜನವರಿ **2022**ರಂದು ರೂ.**1,20,000/-,** ಫೆಬ್ರುವರಿ **2022**ರಲ್ಲಿ ರೂ.**1,30,000/-** ಹಾಗೂ ಮಾರ್ಚ್ ನಲ್ಲಿ ರೂ.**1,00,000/-** ಎಂದು ನುಡಿಯುತ್ತಾರೆ. ಸದರಿ ಹಣವನ್ನು ನೀಡುವಾಗ ಆರೋಪಿ ಕಡೆಯಿಂದ ಯಾವುದಾದರೂ ದಾಖಲೆ ಬರೆಸಿಕೊಂಡಿದ್ದೇನಾ ಎಂದರೆ ಸಾಕ್ಷಿ ಚೆಕ್ ಮತ್ತು ಕರಾರು ಎಂದು ನುಡಿಯುತ್ತಾರೆ.

ಚೆಕ್ ಜನವರಿಯಲ್ಲಿ ಪಡೆದುಕೊಂಡಿರುವುದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಎಷ್ಟು ಚೆಕ್ ಪಡೆದಿರುವುದು ಎಂದರೆ ಸಾಕ್ಷಿ **2** ಚೆಕ್ ಎಂದು ನುಡಿಯುತ್ತಾರೆ. ಸದರಿ ಎರಡೂ ಚೆಕ್ ಖಾಲಿ ಚೆಕ್ ಎಂದರೆ ಸಾಕ್ಷಿ ಹಣ ಬರೆದುಕೊಟ್ಟಿರುವುದಾಗಿ ನುಡಿಯುತ್ತಾರೆ. ನಾನು ರೂ.**1,20,000/-** ಕೊಡುವಾಗ ರೂ.**1,75,000/-**ದ ಎರಡು ಚೆಕ್ ಯಾವ ಕಾರಣಕ್ಕೆ ಪಡೆದಿದ್ದೆ ಎಂದರೆ ಸಾಕ್ಷಿ ಚೆಕ್ ಬರೆದುಕೊಟ್ಟಿರುವುದು ಕೊನೆಯ ದಿನಾಂಕದಂದು ಎಂದು ನುಡಿಯುತ್ತಾರೆ. ನಾನು ಜನವರಿಯಲ್ಲಿ ರೂ.**1,20,000/-** ಹಾಗೂ ಫೆಬ್ರುವರಿಯಲ್ಲಿ ರೂ.**1,30,000/-** ಕೊಡುವಾಗ ಏನು ದಾಖಲೆ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಯಾವುದೇ ದಾಖಲೆ ಪಡೆದಿಲ್ಲ ಎಂದು ನುಡಿಯುತ್ತಾರೆ.

ನನಗೆ ಆರೋಪಿಯ ಪರಿಚಯ ಎಷ್ಟು ವರ್ಷಗಳಿಂದ ಹಾಗೂ ಹೇಗೆ ಎಂದರೆ ಸಾಕ್ಷಿ ನನ್ನಲ್ಲಿ ಜ್ಯೋತಿಷ್ಯ ಕೇಳಲು ಮನೆಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಜ್ಯೋತಿಷ್ಯ ಯಾವ ಆಧಾರದಲ್ಲಿ ಹೇಳುತ್ತೇನೆ ಎಂದರೆ ಸಾಕ್ಷಿ ಕವಡೆ ಹಾಕಿ ಹಾಗೂ ಜಾತಕ ನೋಡಿ ಹೇಳುವುದಾಗಿ ನುಡಿಯುತ್ತಾರೆ.

ನಾನು ಆರೋಪಿಗೆ ಮೂರು ಬಾರಿ ಹಣ ನೀಡುವಾಗ ಬೇರೆ ಯಾರಾದರೂ ಇದ್ದರಾ ಎಂದರೆ ಸಾಕ್ಷಿ ಕರಾರು ಮಾಡುವಾಗ ರಮೇಶ್ ಕಚ್ಚಿನಡ್ಕ, ಹಾಗೂ ಯಶವಂತ ಕಂಬಳಿಮೂಲೆ ಇದ್ದರು ಎಂದು ನುಡಿಯುತ್ತಾರೆ. ಮೂರು ಬಾರಿ ಆರೋಪಿಯ ಜೊತೆ ಯಾರು ಇದ್ದರು ಎಂದರೆ ಸಾಕ್ಷಿ ಅವರ ಗಂಡ ಎಂದು ನುಡಿಯುತ್ತಾರೆ. ಕರಾರು ಮಾಡಿಕೊಟ್ಟಿರುವುದು ಯಾವಾಗ ಎಂದರೆ ಸಾಕ್ಷಿ ಕೊನೆಯ ಕಂತು ನೀಡಿದ **5** ತಿಂಗಳ ನಂತರ ಎಂದು ನುಡಿಯುತ್ತಾರೆ. ಸದರಿ ಕರಾರು ಈಗ ಏನಾಗಿದೆ ಎಂದರೆ ಸಾಕ್ಷಿ ತನ್ನ ಬಳಿ ಇದೆ ಎಂದು ನುಡಿಯುತ್ತಾರೆ. ಸದರಿ ಕರಾರನ್ನು ನ್ಯಾಯಾಲಯಕ್ಕೆ ನೀಡಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಕರಾರಿನಲ್ಲಿ ಹಣಕ್ಕೆ ಎಷ್ಟು ಬಡ್ಡಿ ನೀಡಬೇಕು ಎಂದು ಬರೆದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಕರಾರಿನಲ್ಲಿ ಯಾವಾಗ ದುಡ್ಡು ಕೊಡಬೇಕೆಂದು ಬರೆದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಹಣ ನೀಡುವ ಕಾಲಕ್ಕೆ ಯಾವ ಉದ್ದೇಶಕ್ಕೆ ಹಣ ಪಡೆಯುತ್ತಿದ್ದಾರೆ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿ ಬ್ಯಾಂಕ್ ಲೋನ್ ಕಟ್ಟಲು ಬೇಕಿದ್ದು ನಂತರ ಲೋನ್ ಪಡೆದು ನೀಡುವುದಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ಕರಾರನ್ನು ಯಾರು ಬರೆದರು ಎಂದರೆ ಸಾಕ್ಷಿ ಉಪನೋಂದಣಾಧಿಕಾರಿಗಳ ಕಚೇರಿ ಬಳಿ, ಕೃಷ್ಣರಾಜ್ ಎಂಬ ವಕೀಲರು ತಯಾರಿಸಿರುವುದಾಗಿ ನುಡಿಯುತ್ತಾರೆ. ಕರಾರಿಗೆ ಯಾರು ಸಾಕ್ಷಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ರಮೇಶ ಮತ್ತು ಯಶವಂತ ಎಂದು ನುಡಿಯುತ್ತಾರೆ.

ಆರೋಪಿಯ ಗಂಡ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ಆರೋಪಿ ಪರಿಚಯವಾಗುವ **6** ರಿಂದ **8** ತಿಂಗಳ ಹಿಂದೆ ಎಂದು ನುಡಿಯುತ್ತಾರೆ.

ನನಗೆ ನಿಪಿ-**1**ನ್ನು ನೀಡುವ ಕಾಲಕ್ಕೆ ದಿನಾಂಕ ಬರೆದಿತ್ತಾ ಎಂದರೆ ಸಾಕ್ಷಿ ಬರೆದಿತ್ತು ಎಂದು ನುಡಿಯುತ್ತಾರೆ. ನಾನು ಅದೇ ದಿನಾಂಕಕ್ಕೆ ನಿಪಿ-**1**ನ್ನು ಬ್ಯಾಂಕಿಗೆ ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಎರಡೂ ಚೆಕ್ ಗಳನ್ನು ಅದರಲ್ಲಿ ಬರೆದಿರುವ ದಿನಾಂಕದಂದು ಹಾಜರುಮಾಡಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಹಾಜರುಮಾಡಿದ ಎಷ್ಟು ದಿನಗಳ ನಂತರ ನನಗೆ ಹಿಂಬರಹ ಸಿಕ್ಕಿದೆ ಎಂದರೆ ಸಾಕ್ಷಿ **1** ವಾರದ ನಂತ ಎಂದು ನುಡಿಯುತ್ತಾರೆ. ನಾನು ಚೆಕ್ ಗಳನ್ನು ಒಂದೇ ಬಾರಿ ಹಾಜರಮಾಡಿದ್ದೇನಾ ಅಥವಾ ಎರಡು ಬಾರಿ ಮಾಡಿದ್ದೇನಾ ಎಂದರೆ ಸಾಕ್ಷಿ ಒಂದೇ ಬಾರಿ ಎಂದು ನುಡಿಯುತ್ತಾರೆ.

ನಾನು ಯಾವುದೇ ಕಾಲಕ್ಕೂ ಆರೋಪಿಗೆ ಸಾಲ ನೀಡಿರುವುದಿಲ್ಲ ಎಂದರೆ ಸುಳ್ಳು.

ಕರಾರಿಗೆ ಆರೋಪಿಯ ಗಂಡ ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಎರಡೂ ಪಿರ್ಯಾದಿನಲ್ಲಿ ಆರೋಪಿ ಹಾಗೂ ಅವರ ಗಂಡ ಇಬ್ಬರೂ ಸಾಲ ಪಡೆದಿರುವುದಾಗಿ ತಿಳಿಸಿದ್ದು ಆರೋಪಿ ಗಂಡನನ್ನು ಕರಾರಿನಲ್ಲಿ ಯಾವ ಕಾರಣಕ್ಕೆ ಸೇರಿಸಿಲ್ಲ ಎಂದರೆ ಸಾಕ್ಷಿ ಯಾವುದೇ ಕಾರಣ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿಗೆ ನೋಟೀಸು ನೀಡುವ ಕಾಲಕ್ಕೆ ಅವರ ಗಂಡನಿಗೆ ನೋಟೀಸು ನೀಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಗಂಡನಿಗೆ ನೋಟೀಸು ನೀಡದೇ ಇರಲು ಏನು ಕಾರಣ ಎಂದರೆ ಸಾಕ್ಷಿ ಯಾವುದೇ ಕಾರಣ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಗಂಡ ಇದ್ದಾರಾ ಎಂದರೆ ಸಾಕ್ಷಿ ಒಂದು ವರ್ಷದ ಹಿಂದೆ ಮೃತಪಟ್ಟಿರುವುದಾಗಿ ನುಡಿಯುತ್ತಾರೆ. ಪ್ರಕರಣ ಹಾಕುವಾಗ ಬದುಕಿದ್ದರಾ ಎಂದರೆ ಸಾಕ್ಷಿ ಬದುಕಿದ್ದರು ಎಂದು ನುಡಿಯುತ್ತಾರೆ.

ಆರೋಪಿ ಗಂಡನಿಗೆ ತುಂಬಾ ಕುಡಿಯುವ ಅಭ್ಯಾಸ ಇತ್ತು ಎಂದರೆ ಸಾಕ್ಷಿ ಕುಡಿಯುತ್ತಿದ್ದರು ಎಂದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನಾನು ಆರೋಪಿ ಗಂಡನಿಗೆ ಕುಡಿಯುವ ಅಭ್ಯಾಸ ಇರುವುದನ್ನು ತಿಳಿದುಕೊಂಡು ಅವರಿಗೆ ಸುಳ್ಳು ಆಶ್ವಾಸನೆ ನೀಡಿ ಅವರ ಕಡೆಯಿಂದ ಆರೋಪಿಯ ಖಾಲಿ ಚೆಕ್ ಪಡೆದಿರುತ್ತೇನೆ ಎಂದರೆ ಸುಳ್ಳು. ಅರೋಪಿ ನನಗೆ ಪರಿಚಯವೇ ಇಲ್ಲ ಎಂದರೆ ಸಾಕ್ಷಿ ಅವರು ನಮ್ಮ ಮನೆಗೆ ಹಾಗೂ ನಾನು ಅವರ ಮನೆಗೆ ಹೋಗಿರುವುದಾಗಿ ನುಡಿಯುತ್ತಾರೆ. ನಾನು ಸುಳ್ಳು

ಮಾಹಿತಿ ನೀಡಿ ಆರೋಪಿ ಗಂಡನಿಂದ ಪಡೆದ ಚೆಕ್ ಗಳನ್ನು ದುರುಪಯೋಗ ಮಾಡಿಕೊಂಡು ಸುಳ್ಳು ಪ್ರಕರಣ ಹಾಕಿರುತ್ತೇನೆ ಎಂದರೆ ಸುಳ್ಳು. ಆರೋಪಿ ನನ್ನ ಬಳಿ ನಿಜವಾಗಿ ಯಾವುದೇ ಸಾಲ ಪಡೆದಿಲ್ಲ ಎಂದರೆ ಸುಳ್ಳು. ಆರೋಪಿ ನನಗೆ ಯಾವುದೇ ಕರಾರು ಪತ್ರ ಬೆರದುಕೊಟ್ಟಿಲ್ಲ ಎಂದರೆ ಸುಳ್ಳು. ಆರೋಪಿ ನನಗೆ ಕರಾರು ಪತ್ರ ಬರೆದುಕೊಡದ ಕಾರಣ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ ಎಂದರೆ ಸುಳ್ಳು.

ನಿಪಿ-3 ನೋಟೀಸು ನೀಡಿದ ನಂತರ ಆರೋಪಿಯ ತಂದೆ ನನ್ನ ಬಳಿ ಬಂದು ವಿಚಾರಿಸಿದ್ದು ಅದಕ್ಕೆ ನಾನು ತಪ್ಪಾಗಿ ನೋಟೀಸು ನೀಡಿರುತ್ತೇನೆ ಬಿಟ್ಟು ಬಿಡಿ, ನಾನು ಕೇಸು ಹಾಕುವುದಿಲ್ಲ ಅದಕ್ಕೆ ಉತ್ತರ ಕೊಡುವ ಅಗತ್ಯ ಇಲ್ಲ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿ ತಾನೇ ಆರೋಪಿ ತಂದೆಗೆ ದೂರವಾಣಿ ಕರೆ ಮಾಡಿರುವುದಾಗಿ ನುಡಿಯುತ್ತಾರೆ. ನಾನು ನೋಟೀಸಿಗೆ ಉತ್ತರ ಕೊಡಬಾರದು ಎಂಬ ದೃಷ್ಟಿಯಿಂದ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸುಳ್ಳು. ನಾನು ಆರೋಪಿಯ ತಂದೆಗೆ ಆ ರೀತಿ ಮಾಹಿತಿ ನೀಡಿದ ಕಾರಣ ವಿಶ್ವಾಸದಿಂದ ಆರೋಪಿ ಉತ್ತರ ನೀಡಿಲ್ಲ ಎಂದರೆ ಸುಳ್ಳು. ನಾನು ಚೆಕ್ ಗಳನ್ನು ದುರುಪಯೋಗ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ನನ್ನ ಹಾಗೂ ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಯಾವುದೇ ಕಾಲಕ್ಕೂ ನೀಡಿರುವುದಿಲ್ಲ ಎಂದರೆ ಸುಳ್ಳು. ಆರೋಪಿ ನನ್ನ ಬಳಿ ಪಡೆದಿದ್ದಾರೆ ಎಂದು ತಿಳಿಸಿರುವ ಹಣದ ಪೈಕಿ ಏನಾದರೂ ಹಣ ಹಿಂತಿರುಗಿಸಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ನನಗೆ ಯಾವುದೇ ಮೊತ್ತ ನೀಡಬೇಕಾಗಿ ಬಾದ್ಯತೆ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ನಾನು ಒಂದು ಚೆಕ್ ಅಮಾನ್ಯಗೊಂಡ ನಂತರ ಮತ್ತೊಂದು ಚೆಕ್ ಹಾಜರುಮಾಡುವ ಮೊದಲು ಆರೋಪಿಯ ಬಳಿ ವಿಚಾರ ಮಾಡಿದ್ದೇನಾ ಎಂದರೆ ಸಾಕ್ಷಿ ಮಾಡಿದ್ದು ಕೊಡುತ್ತೇನೆ ಎಂದು ತಿಳಿಸಿರುವುದಾಗಿ ನುಡಿಯುತ್ತಾರೆ. ನಾನು ಆರೋಪಿಯನ್ನು ವಿಚಾರ ಮಾಡಿರುವುದಿಲ್ಲ ಹಾಗೂ ಅವರು ಹಣ ನೀಡುವುದಾಗಿ ಬರವಸೆ ನೀಡಿರುವುದಿಲ್ಲ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**